ಕರ್ನಾಟಕ ಸರ್ಕಾರ

# ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು – 560001

ಸಂಖ್ಯೆ : ಸಿ7(1)ಪ್ರಾಶಿಅ/ಹೊ.ಶಾ.ನೋ/38/2015-16 ದಿನಾಂಕ : 01/12/2015

*ನಮೂನೆ-2*
*(ನಿಯಮ 3 ಉಪನಿಯಮ 5 (ಬಿ)*
*ಪ್ರಮಾಣ ಪತ್ರ ಸಂಖ್ಯೆ : **90/2015-16***

***ಶ್ರೀ ರಾಮಾಂಜನೇಯ ಎಜುಕೇಷನ್ ಟ್ರಸ್ಟ್(ರಿ), ಕದಿರಿನಾಯಕನಹಳ್ಳಿ, ಶಿಡ್ಲಘಟ್ಟ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ*** ಇವರಿಗೆ ಕರ್ನಾಟಕ ಶಿಕ್ಷಣ ಕಾಯ್ದೆ 1983 (ಕರ್ನಾಟಕ ಆ್ಯಕ್ಟ್ 1995) ಸೆಕ್ಷನ್ 31 ರಂತೆ ಹಾಗೂ ಸರ್ಕಾರದ ಆದೇಶ ಸಂಖ್ಯೆ: ಇಡಿ 44 ಪಿ ಜಿ ಸಿ 2002, ದಿನಾಂಕ : 11.06.2002 ರ ಪ್ರಕಾರ ಈ ಕೆಳಗೆ ನಮೂದಿಸಿರುವ ಶಿಕ್ಷಣ ಸಂಸ್ಥೆಯನ್ನು ಕ್ರಮ ಸಂಖ್ಯೆ ***90*** ಪುಟ ಸಂಖ್ಯೆ: ***202*** ವಾಲ್ಯೂಂ ಸಂಖ್ಯೆ: ***18*** ರಲ್ಲಿ ಈ ಕಛೇರಿಯಲ್ಲಿನ ಶೈಕ್ಷಣಿಕ ಸಂಸ್ಥೆಗಳ ನೋಂದಣಿ ವಹಿಯಲ್ಲಿ ನೋಂದಾಯಿಸಲಾಗಿದೆ ಎಂದು ಪ್ರಮಾಣೀಕರಿಸಲಾಗಿದೆ.

| | | |
|---|---|---|
| 1 | ಕ್ರಮ ಸಂಖ್ಯೆ | 90/2015-16 |
| 2 | ಶಾಲೆಯ ಹೆಸರು ಮತ್ತು ವಿಳಾಸ | ಎಸ್.ಆರ್.ಸಿಟಿಜನ್ ಸ್ಕೂಲ್, ವಿಜಯನಗರ, ಶ್ರೀ ಕೃಷ್ಣದೇವರಾಯ ಬಡಾವಣೆ, ಶಿಡ್ಲಘಟ್ಟ, ವಾರ್ಡ್ ನಂ.23, ಚಿಕ್ಕಬಳ್ಳಾಪುರ ಜಿಲ್ಲೆ |
| 3 | ಅನುಮತಿ ನೀಡಿದ ತರಗತಿ | 6 ನೇ ತರಗತಿ 7 ನೇ ತರಗತಿ ಮತ್ತು 8ನೇ ತರಗತಿ [ಶಾಶ್ವತ ಅನುದಾನರಹಿತವಾಗಿ] |
| 4 | ಪ್ರಾರಂಭಿಸಬೇಕಾದ ಶೈಕ್ಷಣಿಕ ವರ್ಷ | 6ನೇ ತರಗತಿ- 2015-16 – 1 ವಿಭಾಗ<br>7ನೇ ತರಗತಿ- 2016-17 – 1 ವಿಭಾಗ<br>8ನೇ ತರಗತಿ- 2017-18 – 1 ವಿಭಾಗ<br>ಒಟ್ಟು – 3 ವಿಭಾಗಗಳು |
| 5 | ಅನುಮತಿ ನೀಡಿದ ಮಾಧ್ಯಮ | ಆಂಗ್ಲ ಮಾಧ್ಯಮ |
| 6 | ಶುಲ್ಕ ಪಾವತಿ ಮಾಡಿರುವುದು | ನೋಂದಣಿ ಶುಲ್ಕ ರೂ 100000-00<br>ಸಂಸ್ಕರಣಾ ಶುಲ್ಕ ರೂ 20000-00 |

ಈ ನೋಂದಣಿ ಪ್ರಮಾಣ ಪತ್ರವನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ನೀಡಲಾಗಿದೆ. ಇದರಲ್ಲಿ ಯಾವುದೇ ಷರತ್ತನ್ನು ಉಲ್ಲಂಘಿಸಿದಲ್ಲಿ ಮೇಲ್ಕಂಡ [ನೋಂದಣಿ] ಅನುಮತಿಯನ್ನು ರದ್ದುಪಡಿಸುವ ಅಧಿಕಾರವನ್ನು ಇಲಾಖೆಯು ಕಾಯ್ದಿರಿಸಿಕೊಂಡಿದೆ.

1. ಈ ನೋಂದಾವಣೆಯು ಕರ್ನಾಟಕ ಶಿಕ್ಷಣ ಸಂಸ್ಥೆಗಳು [ಖಾಸಗಿ ಶಿಕ್ಷಣ ಸಂಸ್ಥೆಗಳ ನಿಯಂತ್ರಣ,ವರ್ಗೀಕರಣ]ನಿಯಮ-1997 ನಿಯಮ-3 [5] [ಡಿ] ನಲ್ಲಿ ಸೂಚಿಸಿರುವ ಅಂಶಗಳಿಗೆ ಒಳಪಟ್ಟಿರುತ್ತದೆ.
2. ಕರ್ನಾಟಕ ಶಿಕ್ಷಣ ಸಂಸ್ಥೆಗಳು (ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯವಸ್ತು ನಿಗದೀಕರಣ ಇತ್ಯಾದಿ) ನಿಯಮಾವಳಿಗಳು 1995ರ ನಿಯಮ 4, 5, 6 ಮತ್ತು 8 ರನ್ವಯ ಸುರಕ್ಷತಾ ಕ್ರಮವಾಗಿ, ಶಾಲಾ ಕಟ್ಟಡವು ಕಡ್ಡಾಯವಾಗಿ ಉತ್ತಮ ಗುಣಮಟ್ಟದ ಮೇಲ್ಛಾವಣಿಯನ್ನು ಹೊಂದಿದ್ದು, ಉತ್ತಮ ಗಾಳಿ ಬೆಳಕಿಗೆ ಅವಕಾಶವಿರಬೇಕು. ಗಂಡು ಮತ್ತು ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಶೌಚಾಲಯಗಳನ್ನು ಒದಗಿಸಬೇಕು. ಕುಡಿಯುವ ನೀರನ್ನು ಒದಗಿಸಿರಬೇಕು. ಶಾಲಾ ಆವರಣದಲ್ಲಿರುವ ಅಪಾಯಕಾರಿ ಸ್ಥಳಗಳಿಗೆ ಬೇಲಿ ಹಾಕಿ, ಶಾಲಾ ಆವರಣಕ್ಕೆ ಮಕ್ಕಳ ಸುರಕ್ಷತೆಗಾಗಿ ಕಾಂಪೌಂಡನ್ನು ಕಡ್ಡಾಯವಾಗಿ ನಿರ್ಮಿಸತಕ್ಕದ್ದು. ಮತ್ತು ಬೆಂಕಿ ಆಕಸ್ಮಿಕಗಳನ್ನು ತಪ್ಪಿಸಲು ಅಗತ್ಯ ಸುರಕ್ಷತಾ ಕ್ರಮಗಳನ್ನು ತೆಗೆದುಕೊಳ್ಳಬೇಕು.
3. ಶಿಕ್ಷಣ ಸಂಸ್ಥೆಯು ಯಾವುದೇ ಸಂದರ್ಭದಲ್ಲಿಯೂ ಸರ್ಕಾರದ ಪೂರ್ವಾನುಮತಿ ಇಲ್ಲದೆ ಹೆಚ್ಚಿನ ವಿಭಾಗಗಳನ್ನು ತೆರೆಯುವಂತಿಲ್ಲ.